

# ಒಡವೆ ಲೋಕದಲ್ಲಿ ನೆಕ್ಲೇಸ್ ಲಾಸ್ಯ

**ಕತ್ತನ್ನು ಬಿಗಿದಪ್ಪುವ ವೈವಿಧ್ಯಮಯ ನೆಕ್ಲೇಸ್ ಎಂದಿಗೂ ಫ್ಯಾಷನ್ ಟ್ರೆಂಡೇ ಆಗಿರುತ್ತದೆ. ನೆಕ್ಲೇಸ್‌ನಲ್ಲೂ ಹಲವು ವಿನ್ಯಾಸದವು ಬಂದಿದ್ದು, ಮಹಿಳೆಯರಿಗೆ ಬಹು ಆಯ್ಕೆಗಳಿವೆ.**

**■ ಉಮಾ ಅನಂತ್**

ಕುತ್ತಿಗೆಗೆ ಧರಿಸುವ ಹಾರ, ಸರ, ಗೆಜ್ಜೆ ಮಾಲಾಕ್, ಚೋಕರ್... ಹೀಗೆ ಯಾವುದೇ ವೈವಿಧ್ಯವಿರಲಿ. ನೆಕ್ಲೇಸ್‌ಗೆ ಸರಿಗಟ್ಟುವ ಕತ್ತಿನ ಆಭರಣ ಬೇರೊಂದಿಲ್ಲ. ಎವರ್‌ಗ್ರೀನ್ ಹೀರೊ ಆಗಿ ಕಂಗೊಳಿಸುವ ನೆಕ್ಲೇಸ್‌ನಲ್ಲಿ ಇದೀಗ ಅದೆಷ್ಟು ಬಗೆ...! ಕತ್ತು ತುಂಬ ಕಾಣುವ, ಕತ್ತನ್ನೇ ಅಪ್ಪಿಕೊಳ್ಳುವ ಆಭರಣ ನೆಕ್ಲೇಸ್, ರೇಷ್ಮೆ ಸೀರೆ ಅಥವಾ ಇನ್ನಾವುದೇ ಗ್ರ್ಯಾಂಡ್ ಉಡುಗೆ ಧರಿಸಿದಾಗ ಒಂದೇ ಒಂದು ನೆಕ್ಲೇಸ್ ಹಾಕಿಕೊಂಡರೆ ಸಾಕು. ನೋಡುವವರ ಕಣ್ಣೆಲ್ಲ ನೆಕ್ಲೇಸ್ ಮೇಲೆಯೇ.

ಮದುವೆಯಂತಹ ಅದ್ದೂರಿ ಕಾರ್ಯಕ್ರಮಗಳಿಗೆ ಅತ್ಯಂತ ಸೂಕ್ತವಾದ ಒಡವೆ ನೆಕ್ಲೇಸ್. ರೇಷ್ಮೆ ಸೀರೆ, ಲೆಹಂಗಾ ತೊಟ್ಟಾಗ ಈ ಆಭರಣ ತೊಟ್ಟರೆ ಸೌಂದರ್ಯ ಇಮ್ಮಡಿಸುತ್ತದೆ. ಹಾಗೆಂದು ನೆಕ್ಲೇಸ್ ಇಂದು ನಿನ್ನೆಯದಲ್ಲ. ಪ್ರಾಚೀನ ಒಡವೆಯೇ ಇದು. ಈಗ ಹೊಸ ಹೊಸ ಅವತಾರ ತಾಳಿ, ಆಧುನಿಕ ರೂಪದಲ್ಲಿ ಅವತರಿಸಿದೆ. ರೂಪದರ್ಶಿಯರು, ಸೆಲೆಬ್ರಿಟಿಗಳು ಡೈಮಂಡ್ ನೆಕ್ಲೇಸ್‌ನಲ್ಲಿ ಮಿಂಚುತ್ತಿದ್ದರೆ, ಮಧ್ಯಮ ವರ್ಗದ ಮಹಿಳೆಯರು ಚಿನ್ನದ ನೆಕ್ಲೇಸ್‌ನಲ್ಲಿ ಗಮನಸೆಳೆಯುವರು. ಈಗೀಗ ಬ್ರೈಡಲ್ ಕಲೆಕ್ಷನ್‌ನಲ್ಲಿ ನೆಕ್ಲೇಸ್ ಮುಖ್ಯ ಸ್ಥಾನ ಪಡೆದುಕೊಂಡಿದೆ. ಅದರಲ್ಲೂ ಪೊಲ್ಕಿ ನೆಕ್ಲೇಸ್‌ಗೆ ಈಗ ಕಾಲ.

ಸ್ಟೇಟ್‌ಮೆಂಟ್ ಲುಕ್ ಕೊಡುವ ಕಾರಣ ಎಲ್ಲರ ಅಚ್ಚುಮೆಚ್ಚಿನ ಒಡವೆ ಆಗಿದೆ. ಅಲ್ಲದೆ ಹಗುರ ನೆಕ್ಲೇಸ್, ಕುಂದನ್ ನೆಕ್ಲೇಸ್, ಕಾಸಿನ ನೆಕ್ಲೇಸ್, ಮಾಣಿಕ್ಯ ನೆಕ್ಲೇಸ್, ಜಾಲರಿ ನೆಕ್ಲೇಸ್... ಅಬ್ಬಬ್ಬಾ.. ಒಂದೇ ಎರಡೇ, ನೆಕ್ಲೇಸ್‌ನಲ್ಲಿರುವ ವೈವಿಧ್ಯ! ಕತ್ತು ತುಂಬ ಇದ್ದರೂ ಒಂದು ಚೂರೂ ಭಾರವೆನಿಸದೆ ಇರುವ 'ಹಗುರ ನೆಕ್ಲೇಸ್' ನೆಕ್ಲೇಸ್‌ಗಳು ಯುವತಿಯರ ಆಕರ್ಷಣೆ. ಚಿನ್ನದಿಂದ ಮಾಡುವ ಈ ನೆಕ್ಲೇಸ್ ಸಣ್ಣಪುಟ್ಟ ಸಮಾರಂಭಗಳಿಗೆ, ಕಚೇರಿಗಳಿಗೆ, ದೈನಂದಿನ ಒಡವೆಯಾಗಿಯೂ ಧರಿಸಬಹುದು. ಆದರೆ ಹಗುರ ನೆಕ್ಲೇಸ್‌ನಲ್ಲಿ ಕಡಿಮೆ ಚಿನ್ನ ಇರುವುದರಿಂದ ಡೆಲಿಕೇಟ್ ಆಗಿರುತ್ತದೆ, ಜಾಗ್ರತೆಯಿಂದ ಕಾಪಾಡಿಕೊಂಡರೆ ಯಾವಾಗ ಬೇಕಾದರೂ ಧರಿಸಬಹುದು.

### ಕಾಸಿನ ನೆಕ್ಲೇಸ್

ಕಾಸಿನ ಸರವೇ ಇರಲಿ, ಓಲೆಯೇ ಇರಲಿ ನೋಡಲು ಬಹಳ ಚಂದ. ಈ ಚಿನ್ನದ ನಾಣ್ಯದಲ್ಲಿ ಮಾಡುವ ನೆಕ್ಲೇಸ್ ಅಂದವೇ ಅಂದ. ಇದು ಪಾರಂಪರಿಕ ಆಭರಣವಾದರೂ ಇದೀಗ ಹೊಸ ರೂಪ ತಾಳಿ ನೆಕ್ಲೇಸ್ ರೂಪದಲ್ಲಿ ಟ್ರೆಂಡ್ ಸೃಷ್ಟಿಸುತ್ತಿದೆ. ಪುಟ್ಟ